Will the Government now consider not to resort to retrench the SC/STs working on work-charge establishment till the Cadre and Recruitment Rules are framed in the Housing Board?

SRI P. F. RODRIGUES —Sir, I made the position very clear, that unless and until the Cadre and Recruitment Rules are finalised it will be very difficult.

MR. SPEAKER.—I think the Housing Board has got power and is competent to do it!

SRI P. F. RODRIGUES.—Sir, I will refer this matter to the Board because of the situation, retrenchment was done, and whosoever was the junior-most had to go. Only one person belonging to SC has been retrenched. I will discuss this with the Commissioner of the Housing Board and see what can be done in the matter.

MR. SPEAKER.—I think the Hon'ble Minister will discuss with the officers concerned and see that justice is done even in the case of temporary appointments.

Statement by the Minister for Food and Forests

re : Support prices for maize

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಇಲಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರ ಅಪ್ಪಣೆಪಡೆದು ಬೆಂಬಲ ಬೆಲೆ ಕಾರ್ಯಾಚರಣೆಯ ಮೇರೆಗೆ ಮಿಶ್ರತಳಿ ಜೋಳದ ಸಂಗ್ರಹಣೆ ಬಗ್ಗೆ ಈ ಕೆಳಕಂಡ ಹೇಳಿಕೆಯನ್ನು ಕೊಡಲಿಕ್ಕೆ ಇಸುಚ್ಛಿತ್ತೇನೆ.

ಆಯಾ ಲೆವಿ ಆದೇಶಗಳ ಮೇರೆಗೆ ಭತ್ತ ಮತ್ತು ರಾಗಿ ಜೋಳವನ್ನು ಮತ್ತು ಬೆಂಬಲ ಬೆಲೆ ಕಾರ್ಯಾಚರಣೆಗಳ ಮೇರೆಗೆ ಮುಂಗಾರು ಭತ್ತ, ರಾಗಿ ಮತ್ತು ಮುಂಗಾರು ಜೋಳವನ್ನು ಸಂಗ್ರಹಿಸಲು ರಾಜ್ಯ ಸರ್ಕಾರವು ನಿರ್ಧರಿಸಿದೆ. ಮಿಶ್ರತಳಿ ಜೋಳವನ್ನು ಬೆಂಬಲ ಬೆಲೆ ಕಾರ್ಯಾಚರಣೆಯ ಮೇರೆಗೆ ಖರೀದಿ ಮಾಡುವ ಬಗ್ಗೆ ರಾಜ್ಯ ಸರ್ಕಾರವು ಯಾವುದೇ ಅಂತಿಮ ನಿರ್ಣಯ ಕೈಕೊಂಡಿಲ್ಲ. ಭಾರತ ಆಹಾರ ನಿಗಮವು ಬೆಂಬಲ ಬೆಲೆ ಕಾರ್ಯಾಚರಣೆಯ ಮೇರೆಗೆ ಮಿಶ್ರತಳಿ ಜೋಳವನ್ನು ಸಂಗ್ರಹಿಸುವ ಕಾರ್ಯ ಕೈಕೊಂಡರೆ, ಭಾರತ ಸರ್ಕಾರಕ್ಕೆ ಎಲ್ಲ ರೀತಿಯ ನೆರವನ್ನು ನೀಡುವುದಾಗಿ ರಾಜ್ಯ ಸರ್ಕಾರವು ಭರವಸೆ ನೀಡಿದೆ. ಈ ಬಗ್ಗೆ ಸಾಕಷ್ಟು ಪತ್ರ ವ್ಯವಹಾರ ನಡೆಸಿದ ನಂತರ, ಭಾರತ ಆಹಾರ ನಿಗಮದ ಪರವಾಗಿ ರಾಜ್ಯ ಸರ್ಕಾರವು ಬೆಂಬಲ ಬೆಲೆ ಕಾರ್ಯಾಚರಣೆಯ ಮೇರೆಗೆ ಮಿಶ್ರತಳಿ ಜೋಳವನ್ನು ಸಂಗ್ರಹಿಸಬಹುದೆಂಬುದಾಗಿ ಭಾರತ ಸರ್ಕಾರವು ಸಲಹೆ ನೀಡಿದೆ. ಆಲ್ಲದೆ ರಾಜ್ಯ ಸರ್ಕಾರವು ಹಾಗೆ ಸಂಗ್ರಹಿಸಿದ ಧಾನ್ಯವನ್ನು ಹಾಗೂ ಅವರಿಗೆ ಬೇಕಾದ್ದಕಿಂತ ಹೆಚ್ಚಿನ ಧಾನ್ಯವನ್ನು ಭಾರತದ ಆಹಾರ ನಿಗಮವು ತೆಗೆದು ಕೊಳ್ಳುವುದೆಂದು ಸಹ ರಾಜ್ಯ ಸರ್ಕಾರಕ್ಕೆ ತಿಳಿಸಿದೆ. ಭಾರತ ಸರ್ಕಾರದವರು ಈ ಕಾರ್ಯಾಚರಣೆಯ ಪ್ರಾಸಂಗಿಕ ಮತ್ತು ಇನ್ನಿತರ ವೆಚ್ಚಗಳ ವಿವರಗಳನ್ನು ತಿಳಿಸಬೇಕೆಂದು ರಾಜ್ಯ ಸರ್ಕಾರದವರನ್ನು ಕೇಳಿದ್ದಾರೆ. ಭಾರತದ ಆಹಾರ ಕಾರ್ಪೊರೇಷನ್ನಿನ ಪರವಾಗಿ ರಾಜ್ಯಾದ್ಯಂತ ಸಹಕಾರಿ ಸಂಘಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ಕಾರ್ಪೊರೇಷನ್ ಲಿಮಿಟೆಡ್ ಇವರು ಮಿಶ್ರತಳಿ ಜೋಳವನ್ನು ಸಂಗ್ರಹಿಸುವ ಸಂಬಂಧದಲ್ಲಿ ಅನುಸರಿಸುತ್ತಿರುವ ನಿಯಮ ಮತ್ತು ನಿಬಂಧನೆಗಳನ್ನು ರಾಜ್ಯ ಸರ್ಕಾರದವರು ಈಗಾಗಲೇ ತಿಳಿಸಿದ್ದಾರೆ. ಈ ನಿಯಮ ನಿಬಂಧನೆಗಳಿಗೆ ಭಾರತ ಸರ್ಕಾರದ ಒಪ್ಪಿಗೆಯನ್ನು ನಿರೀಕ್ಷಿಸಲಾಗಿದೆ.

ಈ ಮಧ್ಯೆ, ಇನ್ನೂ ವಿಳಂಬವಾಗದ ಹಾಗೆ ಮತ್ತು ಬೆಂಬಲ ಬೆಲೆಗಿಂತಲೂ ಕಡಿಮೆ ಬೆಲೆಗೆ ಮಾರಾಟ ಮಾಡಿದ ಪ್ರಸಂಗದಲ್ಲಿ ಬೆಳೆಗಾರರಿಗೆ ಆಗಬಹುದಾದ ನಷ್ಟ ಮತ್ತು ಕಷ್ಟಗಳನ್ನು ನಿವಾರಿಸುವ ಸಲುವಾಗಿ ಧಾನ್ಯ ಸಂಗ್ರಹಣಾ ಕಾರ್ಯಾಚರಣೆಯನ್ನು ಮುಂದುವರೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ಸಂಬಂಧದಲ್ಲಿ ಸ್ಥಳೀಯ ಅಧಿಕಾರಿಗಳೂ ಸೇರಿದಂತೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗಿದೆ.

ಧಾನ್ಯ ಸಂಗ್ರಹಣಾ ಕಾರ್ಯಾಚರಣೆಯಲ್ಲಿ ಎರಡು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಮೊದಲನೆಯದಾಗಿ, ಎಫ್. ಎ. ಕ್ಯೂ. ಗುಣಮಟ್ಟದ ಧಾನ್ಯಗಳ ಸಂಗ್ರಹಣೆಯಾಗುವಂತೆ ನೋಡಿಕೊಳ್ಳಬೇಕು. ಎರಡನೆಯದಾಗಿ, ವಾಸ್ತವ ಬೆಳೆಗಾರರಿಂದ ಧಾನ್ಯ ಸಂಗ್ರಹವಾಗಿದೆಯೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಈ ಅಂಶಗಳನ್ನು ಗಮನದಲ್ಲಿರಿಸಿ, ಪ್ರಾರಂಭದಲ್ಲಿ ತಾಲ್ಲೂಕು ಮಟ್ಟದಲ್ಲಿ ಧಾನ್ಯ ಸಂಗ್ರಹಣೆಯನ್ನು ಪ್ರಾರಂಭಿಸಲು ಮತ್ತು ಕೆಳಗಿನ ಹಂತಗಳಲ್ಲಿ ಸಂಗ್ರಹಣಾ ಸಿಬ್ಬಂದಿಯವರು ಎಫ್. ಎ. ಕ್ಯೂ. ಗುಣಮಟ್ಟದ ವಿಧಾನದಲಿ ತರಬೇತಿ ಪಡೆದನಂತರ ಆ ಮಟ್ಟಿಗಳಿಗೂ ಈ ಕಾರ್ಯಾಚರಣೆಯನ್ನು ವಿಸ್ತರಿಸಲು ಸೂಚನೆಗಳನ್ನು ನೀಡಲಾಗಿದೆ. ಸಾಧ್ಯವಾದಷ್ಟು ಮಟ್ಟಿಗೆ ಎಫ್. ಎ. ಕ್ಯೂ. ಗುಣಮಟ್ಟದ ಧಾನ್ಯಗಳನ್ನು ಸಂಗ್ರಹಿಸುವಲ್ಲಿ ಮತ್ತು ಕೆಳಗಿನ ಮಟ್ಟದಲ್ಲಿ ಸಂಗ್ರಹಣಾ ಸಿಬ್ಬಂದಿಗೆ ಎಫ್. ಎ. ಕ್ಯೂ. ಗುಣಮಟ್ಟದ ವಿಚಾರದಲ್ಲಿ ತರಬೇತಿ ನೀಡುವ ಸಲುವಾಗಿ ಸಹಕಾರಿ ಸಂಘಗಳ ಸಂಗ್ರಹಣಾ ಸಿಬ್ಬಂದಿಯೊಂದಿಗೆ ಸಹಕರಿಸುವುದಕ್ಕಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರು ಗುಣಮಟ್ಟ ನಿಯಂತ್ರಣ ಪರಿವೀಕ್ಷಕರನ್ನು ಪ್ರತಿ ತಾಲ್ಲೂಕಿಗೂ ಪ್ರತಿನಿಯೋಜಿಸುತ್ತಾರೆ. ಈ ತರಬೇತಿ ಕಾರ್ಯಕ್ಕೆ ಒಂದು ಅಥವಾ ಎರಡು ವಾರಗಳು ಬೇಕಾಗಬಹುದು. ಈ ಕಾರ್ಯದಲ್ಲಿ ಭಾರತ ಆಹಾರ ನಿಗಮದ ಕಾರ್ಯನಿರ್ವಾಹಕರನ್ನು ಮತ್ತು ಗುಣಮಟ್ಟ ನಿಯಂತ್ರಣ ಸಿಬ್ಬಂದಿಯವರನ್ನು ಸಹ ಸೇರಿಸಿಕೊಳ್ಳಲಾಗುವುದು ಮತ್ತು ಅವರ ಸಕ್ರಿಯ ಸಹಕಾರವನ್ನು ಪಡೆಯಲಾಗುವುದು. ಜೊತೆಗೆ, ಮಾದರಿಗೆ ಸರಿ ಹೊಂದುವಂಥ ಕಾಳುಗಳನ್ನು ಸಂಗ್ರಹಣ ಸಿಬ್ಬಂದಿಯವರು ಪಡೆಯಲು ಸಾಧ್ಯವಾಗುವಂತೆ ಪ್ರತಿಯೊಂದು ಖರೀದಿ ಸ್ಥಳದಲ್ಲಿ ಎಫ್. ಎ. ಕ್ಯೂ. ಗುಣಮಟ್ಟದ ಕಾಳುಗಳ ಮಾದರಿಯನ್ನು ಮೊಹರು ಮಾಡಲಾದ ಮತ್ತು ಪ್ರಮಾಣೀಕೃತವಾದ ಒಂದು ಸಣ್ಣ ಪಾಲಿಥಿನ್ ಚೀಲದಲ್ಲಿ ಇಡಲಾಗುವುದು. ಅನುಮಾನ ಬರುವ ಸಂದರ್ಭಗಳಿದ್ದಲ್ಲಿ ಕಾಳುಗಳನ್ನು ಖರೀದಿ ಮಾಡುವ ಮೊದಲು, ಮಾರಾಟಗಾರನು ತಾನು ವಾಸ್ತವ ಬೆಳೆಗಾರನೆಂದು ಒಂದು ಅಫಿಡಾವಿಟ್ ಅನ್ನು ಒದಗಿಸುವಂತೆ ಅವಶ್ಯಪಡಿಸಲಾಗುವುದು.

ಮಿಶ್ರತಳಿ ಜೋಳವನ್ನು ಮಾರಾಟ ಮಾಡುವ ಬೆಳೆಗಾರರಿಗೆ ಪ್ರತಿ ಕ್ವಿಂಟಾಲಿಗೆ ೮೫-೦೦ ರೂಪಾಯಿಗಳಂತೆ ಬೆಂಬಲ ಬೆಲೆಯನ್ನು ನೀಡಲಾಗುವುದು. ಜೊತೆಗೆ, ಬೆಳೆಗಾರನು ಖರೀದಿ ಸ್ಥಳಕ್ಕೆ ಕಾಳನ್ನು ಸಾಗಿಸಿದರೆ ಪ್ರತಿ ಕ್ವಿಂಟಾಲಿಗೆ ೫-೨೫ ರೂಪಾಯಿಗಳಂತೆ ಮತ್ತು ಖರೀದಿ ಸ್ಥಳಕ್ಕಲ್ಲದೆ ಗೋಡೌನಿಗೆ ಕಾಳನ್ನು ಸಾಗಿಸಿದರೆ ೬-೦೦ ರೂಪಾಯಿಗಳಂತೆ ಸಾಗಣೆ ವೆಚ್ಚವನ್ನು ಕೊಡಲಾಗುವುದು. ಸಾಗಣೆ ವೆಚ್ಚಗಳ ಸಂದಾಯಕ್ಕೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರವೇ ಸಂಪೂರ್ಣವಾಗಿ ವಹಿಸಿಕೊಳ್ಳುವುದು.

Karnataka Appropriation Bill, 1979
Governor's Recommendation

MR. SPEAKER.—I have received a message from the Governor of Karnataka recommending introduction and consideration of Karnataka Appropriation Bill, 1979.

SRI S. M. YAHYA (Minister for Finance).—I introduce I beg to move

"That leave be granted to introduce the Karnataka Appropriation Bill, 1979"